**ಕರ್ನಾಟಕ ವಿಧಾನಸಭೆ**

ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ. ಮಧು ಜಿ ಮಾದೇಗೌಡ (ಪದವೀಧರ ಕ್ಷೇತ್ರ).

ಪ್ರಶ್ನೆ ಸಂಖ್ಯೆ: 539 (668)

ಉತ್ತರಿಸಿದ ದಿನಾಂಕ: 13.12.2024

ವಿಷಯ : ಜೆ.ಎಂ.ಎಂ ನಿಯಮಗಳನ್ನು ಉಲ್ಲಂಘಿಸಿ ಕಾಮಗಾರಿಗಳನ್ನು ಅನುಷ್ಠಾನಿಸುತ್ತಿರುವ ಬಗ್ಗೆ

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಹಾಸನ ಜಿಲ್ಲೆಯಲ್ಲಿ ಜಲ ಜೀವನ್ ಮಿಷನ್ (ಜೆಜೆಎಂ) ಅಡಿಯಲ್ಲಿ ಫೇಸ್-1,2, 3 ಮತ್ತು 4ರಲ್ಲಿ ಆಯ್ಕೆ ಮಾಡಿಕೊಂಡಿರುವ ಎಲ್ಲಾ ಗ್ರಾಮಗಳಿಗೆ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಕೆಟಿಪಿಪಿ ನಿಯಮಗಳನ್ವಯ ಸಿದ್ಧಪಡಿಸಿಕೊಂಡು ಅನುಷ್ಠಾನಿಸಲಾಗುತ್ತಿದೆಯೇ, | ಹಾಸನ ಜಿಲ್ಲೆಯಲ್ಲಿ ಜಲ ಜೀವನ್ ಮಿಷನ್ (ಜೆಜೆಎಂ) ಅಡಿಯಲ್ಲಿ ಫೇಸ್-1,2, 3 ಮತ್ತು 4ರಲ್ಲಿ ಆಯ್ಕೆ ಮಾಡಿಕೊಂಡಿರುವ ಎಲ್ಲಾ ಗ್ರಾಮಗಳಿಗೆ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಕೆಟಿಪಿಪಿ ನಿಯಮಗಳನ್ವಯ ಸಿದ್ಧಪಡಿಸಿಕೊಂಡು ಅನುಷ್ಠಾನಿಸಲಾಗುತ್ತಿದೆ. |
| ಆ) | ಕೆಟಿಪಿಪಿ ನಿಯಮಗಳನ್ವಯೊಂದು ಗ್ರಾಮದ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಸಿದ್ಧಪಡಿಸುವಾಗ ಯಾವ ಕಾಮಗಾರಿಗಳನ್ನು ಸೇರ್ಪಡೆ ಮಾಡಲಾಗುತ್ತಿದೆ, (ವಿವರ ನೀಡುವುದು) | ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಸಿದ್ಧಪಡಿಸುವಾಗ ಗ್ರಾಮಕ್ಕೆ ಹಾಗೂ ಸ್ಥಳಕ್ಕೆ ಅನುಗುಣವಾಗಿ ಕಾಮಗಾರಿಯನ್ನು ಪಡೆಯಲಾಗಿದ್ದು, ವಿವಿರ ಈ ಕೆಳಗಿನಂತಿದೆ: -<br>1. ಪೈಪ್ ಲೈನ್ ಕಾಮಗಾರಿ<br>2. ಓ.ಹೆಚ್.ಟಿ ನಿರ್ಮಾಣ,<br>3. ಕಾರ್ಯಾತ್ಮಕ ನಳ ಸಂಪರ್ಕ<br>4. ಪಂಪ್ ಮತ್ತು ಮೋಟಾರ್ ಅಳವಡಿಸುವುದು.<br>5. ಕೊಳವೆಬಾವಿ ಕೊರೆಯುವುದು,<br>6. ನಾಮಫಲಕ ಅಳವಡಿಸುವುದು. |
| ಇ) | ಕಾಮಗಾರಿಗಳನ್ನು ಪ್ರತ್ಯೇಕಗೊಳಿಸಲು ನಿಯಮಗಳಲ್ಲಿ ಅವಕಾಶವಿದೆಯೇ, ಅವಕಾಶವಿದ್ದಲ್ಲಿ, ಸರ್ಕಾರದ ಆದೇಶ ಪ್ರತಿ ಒದಗಿಸುವುದು, | ಇಲ್ಲ. |
| ಈ) | ಹಾಸನ ಜಿಲ್ಲೆಯಾದ್ಯಂತ ಬಹುತೇಕ ಕಾಮಗಾರಿಗಳ್ಲಿ ಒಂದು ಗ್ರಾಮದ ಕಾಮಗಾರಿಯ ಗುತ್ತಿಗೆಯನ್ನು ಒಂದೇ ಟೆಂಡರ್ ನಲ್ಲಿ ಅಳವಡಿಸದೇ ವಿಭಜಿಸಿ ನಾಮಫಲಕ ಅಳವಡಿಸುವ ಕಾಮಗಾರಿ, ವಿದ್ಯುತ್ ಕಾಮಗಾರಿ, ಬೋರ್ ವೆಲ್ ಕೊರೆಯುವ ಕಾಮಗಾರಿಗಳನ್ನು ಬೇರೆ ಬೇರೆ ಗುತ್ತಿಗೆದಾರರಿಗೆ ನೀಡಿ ನಿಯಮಗಳನ್ನು ಉಲ್ಲಂಘಿಸಿವುದು ಸರ್ಕಾರದ ಗಮನಕ್ಕೆ ಬಂದಿದೆಯೇ, | ಜಲಮೂಲವನ್ನು ಆಧರಿಸಿ ವಿಸ್ತ್ರತ ಯೋಜನಾ ವರದಿಯನ್ನು ತಯಾರಿಸಲಾಗಿರುತ್ತದೆ ಹಾಗೂ ಸದರಿ ಕಾಮಗಾರಿಯನ್ನು ವಿಭಜಿಸದೇ ಟೆಂಡರ್ ಕರಾರಿನಂತೆ ನಿರ್ವಹಿಸಲಾಗುತ್ತಿದೆ. |
| ಉ) | ಹಾಗಿದ್ದಲ್ಲಿ, ವಿವಿಧ ಹಂತಗಳಲ್ಲಿ ತೆಗೆದುಕೊಂಡಿರುವ ಎಷ್ಟು ಕಾಮಗಾರಿಗಳಲ್ಲಿ ಈ ರೀತಿನಿಯಮಗಳನ್ನು ಉಲ್ಲಂಘಿಸಲಾಗಿದೆ, (ಯೋಜನಾ ಹಂತವಾರು ಮಾಹಿತಿ ನೀಡುವುದು) | ಉಲ್ಲಂಘನೆಯಾಗಿರುವುದಿಲ್ಲ. |
| ಊ) | ಕೆಟಿಪಿಪಿ ನಿಯಮಗಳನ್ನು ಉಲ್ಲಂಘಿಸಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ರೀತಿ ಶಿಸ್ತುಕ್ರಮಗಳನ್ನು ಜರುಗಿಸಲಿದೆ? (ಸಂಪೂರ್ಣ ವಿವರ ನೀಡುವುದು) | ಉಲ್ಲಂಘನೆಯಾಗಿರುವುದಿಲ್ಲ. |

(ಪ್ರಿಯಾಂಕ್ ಖರ್ಗೆ),

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು